ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಮುಂದುವರಿದ ಪಾಟೀ ಸವಾಲುಃ- ಶ್ರೀ. ಎಸ್.ಆರ್.ಜೆ. ವಕೀಲರಿಂದ

ಆರೋಪಿಯ ಪರವಾಗಿ

21. ಕುಮ್ಕಿ ಜಾಗದಲ್ಲಿ ಮಾತ್ರ ಕೃಷಿ ಇದೆ. ಎರಡುವರೆ ಎಕರೆ ಜಾಗದಲ್ಲಿಯೂ ಸಹಃ ಕೃಷಿ ಇದೆ. 2000 ಕ್ಕಿಂತ ಅಧಿಕ ಅಡಿಕೆ ಗಿಡಗಳು ಇವೆ. 32 ಕ್ವಿಂಟಲ್ ವರೆಗೆ ಭತ್ತ ಸಿಗುತ್ತದೆ. ಒಟ್ಟು 20 ಕ್ವಿಂಟಲ್ ಅಡಿಕೆ ಸಿಗುತ್ತದೆ. ಆರೋಪಿಗೆ ಹಣ ನೀಡಲು ರೂ. 4,00,000/- ಹಣವನ್ನು ಡ್ರಾ ಮಾಡಿರುತ್ತೇನೆ. ಆದರೆ ನಿಖರವಾದ ದಿನಾಂಕ ನನಗೆ ಗೊತ್ತಿಲ್ಲ. ಯಾವ ಉದ್ದೇಶಕ್ಕೆ ಸಾಲ ನೀಡಿದ್ದೇನೆ ಎಂದು ದೂರಿನಲ್ಲಿ ಹೇಳಿರುವುದಿಲ್ಲ. ನಾನು ಆರೋಪಿಗೆ ಹಣವನ್ನು ಆರೋಪಿಯ ಅಂಗಡಿಯ ಬಳಿ ದಿನಾಂಕಃ 10.11.2024 ರಂದು ನೀಡಿರುತ್ತೇನೆ.

22. ಆರೋಪಿಗೆ ಹಣ ನೀಡಿದ ಎರಡು ತಿಂಗಳ ನಂತರ ಚೆಕ್ಕನ್ನು ನಗದೀಕರಣಕ್ಕೆ ಸಲ್ಲಿಸಿರುತ್ತೇನೆ. ನಾನು ಆರೋಪಿಗೆ ಯಾವುದೇ ಹಣವನ್ನು ನೀಡಿಲ್ಲ ಎಂದರೆ ಸರಿಯಲ್ಲ. ಚೆಕ್ಕನ್ನು ಯಾರು ಬರೆದರು ಎಂದು ನನಗೆ ಗೊತ್ತಿಲ್ಲ. ಆರೋಪಿಯು ನನ್ನ ವಿರುದ್ಧ ಠಾಣೆಗೆ ಪ್ರಕರಣ ದಾಖಲು ಮಾಡಿದ್ದರು ಎಂದರೆ ಸರಿ. ಆದರೆ ನಾನು ಠಾಣೆಗೆ ವಿಚಾರಣೆಗೆ ಹಾಜರಾಗಿಲ್ಲ. ಠಾಣೆಗೆ ಹೋಗಿ ವಿಚಾರಣೆಗೆ ಹಾಜರಾದರೆ ನಿಜಾಂಶ ತಿಳಿಯುತ್ತದೆ ಎಂಬ ಕಾರಣಕ್ಕೆ ಠಾಣೆಗೆ ಹೋಗಿಲ್ಲ ಎಂದರೆ ಸರಿಯಲ್ಲ.

23. ನಾನು ಈಗ ಓಡಿಲ್ನಾಲ ಮಾಹಾಲಿಂಗೇಶ್ವರ ದೇವಸ್ಥಾನದ ಸಮಿತಿಯ ಸದಸ್ಯ. ಈ ಹಿಂದೆ ಆರೋಪಿಯು ದೇವಸ್ಥಾನದ ಸಮಿತಿಯ ಬೇರೆ ಕಮಿಟಿಯಲ್ಲಿ ಇದ್ದರು. ಆರೋಪಿಯು ದೇವಸ್ಥಾನದ ವಿಚಾರವಾಗಿ ನನ್ನ ವಿರುದ್ಧ ಸಲ್ಲಿಸಿದ ದೂರಿಗೆ ಪ್ರತಿಯಾಗಿ ನಾನು ಈ ಪ್ರಕರಣವನ್ನು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ದೇವಸ್ಥಾನದ ವಾಟ್ಸಪ್ ಗ್ರೂಪ್ ನಲ್ಲಿ ಸದಸ್ಯನಾಗಿದ್ದೇ. ಸದರಿ ಗ್ರೂಪ್ ನ ಸದಸ್ಯರನ್ನು ಸಾಕ್ಷ್ಯ ಮಾಡಿದರೆ ನನ್ನ ತಕರಾರು ಇಲ್ಲ. ಆರೋಪಿಯಿಂದ ದುರ್ಲಾಭ ಪಡೆಯಲು ಈ ಪ್ರಕರಣವನ್ನು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ. ಇದೆ.

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬೆಳ್ತಂಗಡಿ